ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಕಂಡಿಕೆ (43) ರಲ್ಲಿ ಮಾನ್ಯ ಮುಖ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಅಧ್ಯಕ್ಷತೆಯಲ್ಲಿ ನಡೆದ ಟೆಂಡರ್ ಮೌಲ್ಯ ಮಾಪನ ಸಮಿತಿಯಲ್ಲಿ ತಾಂತ್ರಿಕವಾಗಿ ಅರ್ಹರಾಗಿರುವ 1) GOPIREDDY 2) K R SANTHOSH KUMAR ರವರುಗಳ ತಾಂತ್ರಿಕ ಬಿಡ್‌ಅನ್ನು ಅನುಮೋದಿಸಿ ಆರ್ಥಿಕ ಬಿಡ್‌ಅನ್ನು ತೆರೆಯಲು ಸಮಿತಿಯಲ್ಲಿ ತಿರ್ಮಾನಿಸಲಾಗಿರುತ್ತದೆ, ಅದರಂತೆ ತಾಂತ್ರಿಕವಾಗಿ ಅರ್ಹರಾಗಿರುವ ಇಬ್ಬರು ಬಿಡ್ದುದಾರರ ಆರ್ಥಿಕ ಬಿಡ್‌ಅನ್ನು ತೆರೆಯಲಾಗಿದ್ದು, ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ	ಗುತ್ತಿಗೆದಾರರ ಹೆಸರು	ಟೆಂಡರ್ ಗಿಟ್ಟ ಮೊತ್ತ 2018-19 ರ ಅನುಮೋದಿತ ದರಗಳಿಗೆ ಹೊಲಿಸಿದಾಗ.	ಗುತ್ತಿಗೆ ದಾರರು ನಮೂದಿ ಸಿರುವ ದರಗಳು	2018-19ನೇ ಸಾಲಿನ ಎಸ್.ಆರ್‌ದರಗಳಿಗೆ ಹೋಲಿಸಿದಾಗ ಶೇಕಡ ವಾರು	ಇಶ್ಯೂ ರೇಟ್ ಮೊತ್ತಕ್ಕೆ % ದರ ವ್ಯತ್ಯಾಸ	ಷರಾ
01	K R SANTHOSH KUMAR	52493458.42	54067543.32	+2.99% ಹೆಚ್ಚು	-5.14% ಕಡಿಮೆ	ಎಲ್-1
02	GOPIREDDY		54645420.05	+4.09% ಹೆಚ್ಚು	-4.13% ಕಡಿಮೆ	ಎಲ್-2

44)

ಮೇಲ್ಕಂಡ ಇಬ್ಬರು ಗುತ್ತಿಗೆದಾರರು ಸಲ್ಲಿಸಿರುವ ಆರ್ಥಿಕ ಬಿಡ್‌ಅನ್ನು ಪರಿಶೀಲಿಸಲಾಗಿ K R SANTHOSH KUMAR ರವರು ನಮೂದಿಸಿರುವ ರೂ. 54067543.32 ಗಳಷ್ಟು ನಮೂದಿಸಿ ಎಲ್-1 ಬಿಡ್‌ದಾರರಾಗಿರುತ್ತಾರೆ.

ಆದುದರಿಂದ ಗುತ್ತಿಗೆದಾರರಾದ K R SANTHOSH KUMAR ರವರು ನಮೂದಿಸಿರುವ ರೂ. 54067543.32 ಗಳು ದರಗಳಾಗಿದ್ದು, ಅನುಮೋದಿತ ಅಂದಾಜು ಪಟ್ಟಿಯ 2018-19 ಸಾಲಿನ ದರಗಳಿಗೆ ತುಲನೆ ಮಾಡಿದಾಗ ಶೇಕಡ (+)2.99% ರಷ್ಟು ಹೆಚ್ಚು, (ಹಾಗೂ ಪ್ರಸ್ತುತ ಚಾಲ್ತಿಯಲ್ಲಿರುವ ಇಶ್ಯೂ ದರಗಳಿಗೆ ಹೋಲಿಸಿದಾಗ -5.14% ಕಡಿಮೆ ಇರುತ್ತದೆ) ದರಗಳನ್ನು ನಮೂದಿಸಿ ಎಲ್-1 ಬಿಡ್‌ದಾರರಾಗಿರುತ್ತಾರೆ. ಅದರಂತೆ ಸದರಿ ಗುತ್ತಿಗೆದಾರರು ಸಲ್ಲಿಸಿರುವ ದರಗಳಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಕೋರಿ ಕಡತವನು ಮಂಡಿಸಿದೆ.

ಕಾರ್ಯನಿರ್ವಾಹಕ ಅಭಿಯಂತರರು 18/11
ಬಾಂಡರಾಯನಪುರ ವಿಭಾಗ
BBMP, Bangalore-92
18/11

ಮುಖ್ಯ ಅಭಿಯಂತರರು (ಯಲಹಂಕ ವಲಯ)

ಗುತ್ತಿಗೆದಾರರಿಂದ ಪರ ಸಂಖ್ಯೆ ನೆಕೆಸಿ ಪಡೆಯಿರಿ.
18/11

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ ..... -19-

..... ಕಡತದ ಸಂಖ್ಯೆ .....

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
46	ಕಂಡಿಕೆ (45) ರಲ್ಲಿ ಮುಖ್ಯ ಅಭಿಯಂತರರು ಯಲಹಂಕ ವಲಯರವರು ಎಲ್-1 ಗುತ್ತಿಗೆದಾರರೊಂದಿಗೆ ದರ ಸಂದಾನ ನಡೆಸಲು ಸೂಚಿಸಿರುವ ಮೇರೆಗೆ ದಿನಾಂಕ: 23-11-2021 ರಂದು ಗುತ್ತಿಗೆದಾರರಿಗೆ ದರಸಂಧಾನ ಪತ್ರವನ್ನು ನೀಡಲಾಗಿರುತ್ತದೆ. ಅದರಂತೆ ಗುತ್ತಿಗೆದಾರರು ದಿನಾಂಕ: 30-11-2021 ರಂದು ಈ ಕಛೇರಿಗೆ ಪತ್ರ ನೀಡಿ, ಸದರಿಯವರು ಟೆಂಡರ್‌ನಲ್ಲಿ ದರಗಳನ್ನು ನಮೂದಿಸಿದ ನಂತರ ಲೋಕೋಪಯೋಗಿ ಇಲಾಖೆಯಿಂದ ಇಶ್ಯೂ ರೇಟ್ ದರ ಪಟ್ಟಿಯಲ್ಲಿ ಸಿಮೆಂಟ್, ಸ್ಟೀಲ್ ಮತ್ತು ಬಿಟುಮಿನ್ ದರಗಳನ್ನು ಪರಿಷ್ಕರಿಸಲಾಗಿರುತ್ತದೆ. ಈ ಪರಿಷ್ಕೃತ ದರಗಳನ್ನು ಅಳವಡಿಸಿದಾಗ ನಾನು ಈ ಹಿಂದೆ ಅಂದಾಜು ಪಟ್ಟಿಗೆ ನಮೂದಿಸಿದ್ದ ಶೇ 2.99% ಹೆಚ್ಚು ದರಗಳಾಗಿದ್ದವು ಆದರೆ, ಪರಿಷ್ಕೃತ ದರಗಳಿಗೆ ಹೋಲಿಸಿದಾಗ ನಾವು ನಮೂದಿಸಿರುವ ದರಗಳು ಶೇ. -5.14% ಗಳಷ್ಟು ಅಂದಾಜು ಪಟ್ಟಿಗೆ ಕಡಿಮೆಯಾಗಿರುತ್ತದೆ. ಈಗಾಗಲೇ ಇಶ್ಯೂ ರೇಟ್ ದರ ಪಟ್ಟಿಯಲ್ಲಿ ಸೂಚಿಸಿರುವಂತೆ ಸಿಮೆಂಟ್, ಸ್ಟೀಲ್ ಮತ್ತು ಬಿಟುಮಿನ್ ದರಗಳು ಟೆಂಡರ್ ಆಹ್ವಾನಿಸಿದ್ದ ದಿನಾಂಕಕ್ಕೆ ಬಹಳಷ್ಟು ಹೆಚ್ಚುವರಿಯಾಗಿರುತ್ತದೆ, ಲೋಕೋಪಯೋಗಿ ಇಲಾಖೆ ಅಧೀಕ್ಷಕ ಅಭಿಯಂತರರು ಹೊರಡಿಸಿದ ದರ ಪಟ್ಟಿಯ ಆದೇಶ ಸಂಖ್ಯೆ: ಎಸ್‌ಇಬಿಸಿ-3:ದರಪಟ್ಟಿ:2021-22:4093, ದಿನಾಂಕ: 02-11-2021 ಲಗತ್ತಿಸಿ, ಗುತ್ತಿಗೆದಾರರು ಟೆಂಡರ್‌ನಲ್ಲಿ ನಮೂದಿಸಿರುವ ದರಗಳನ್ನು ಪರಿಗಣಿಸಿ ಅನುಮೋದನೆ ನೀಡುವಂತೆ ಕೋರಿರುತ್ತಾರೆ.
47	ಈ ಮೇಲ್ಕಂಡ ವಿವರಗಳಂತೆ ದರ ಸಂದಾನದ ನಂತರ ಗುತ್ತಿಗೆದಾರರು ಕೋರಿರುವಂತೆ, ಅನುಮೋದಿತ ಅಂದಾಜು ಪಟ್ಟಿಯ 2018-19 ಸಾಲಿನ ದರಗಳಿಗೆ ತುಲನೆ ಮಾಡಿದಾಗ ಶೇಕಡ (+)2.99% ಹೆಚ್ಚು ಹಾಗೂ ಪ್ರಸ್ತುತ ಚಾಲ್ತಿಯಲ್ಲಿರುವ ಇಶ್ಯೂ ದರಗಳಿಗೆ ಹೋಲಿಸಿದಾಗ ಶೇ. -5.14% ಗಳಷ್ಟು ಕಡಿಮೆ ಇರುತ್ತದೆ. ಸದರಿ ದರಗಳಿಗೆ ಸಕ್ಷಮ ಪ್ರಾಧಿಕಾರದಿಂದ ಟೆಂಡರ್ ಅನುಮೋದನೆಯನ್ನು ಕೋರಿ ಕಡತವನ್ನು ಮಂಡಿಸಿದೆ.

30/11

ಕಾರ್ಯಪಾಲಕ ಅಭಿಯಂತರರು
ಯಲಹಂಕ ವಿಭಾಗ
Executive Engineer
Byatarayanapura Division
BBMP, Bangalore-92
30/11

ಮುಖ್ಯ ಅಭಿಯಂತರರು (ಯಲಹಂಕ ವಲಯ)

48

ಮುಖ್ಯ ಅಭಿಯಂತರರ ಕಛೇರಿ
01 DEC 2021
570
ಬಿ.ಬಿ.ಎಂ.ಪಿ,ಯಲಹಂಕ ವಲಯ.

TA

ವಿಷಯ :

ಪುಟದ ಸಂಖ್ಯೆ ..... -20-

ಕಡತದ ಸಂಖ್ಯೆ .....

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
(49)	ಕಂಡಿಕೆ (46) ರಿಂದ (47) ರವರೆಗೆ ಕಾರ್ಯಪಾಲಕ ಅಭಿಯಂತರರು ಬ್ಯಾಟರಾಯನಪುರ ವಿಭಾಗರವರ ವರದಿಯಂತೆ ಬ್ಯಾಟರಾಯನಪುರ ವಿಧಾನ ಸಭಾಕ್ಷೇತ್ರಕ್ಕೆ ಒಳಪಡುವ 110ಹಳ್ಳಿಗಳ ಪ್ರದೇಶಗಳಲ್ಲಿ ಬೆಂಗಳೂರು ಜಲಮಂಡಳಿ ವತಿಯಿಂದ ಅಗೆದಿರುವ ರಸ್ತೆಗಳನ್ನು ಪುನಶ್ಚೇತನಗೊಳಿಸಲು ಘನ ಸರ್ಕಾರದಿಂದ ಬ್ಯಾಟರಾಯನಪುರ ವಿಧಾನ ಸಭಾ ಕ್ಷೇತ್ರಕ್ಕೆ ರೂ. 17.00 ಕೋಟಿಗಳ ಅನುದಾನ ಮಂಜೂರಾಗಿದ್ದು, ಸದರಿ ಕಾಮಗಾರಿಗೆ ರೂ. 6.00 ಕೋಟಿಯ ಪ್ಯಾಕೇಜ್‌ವಾರು ಟೆಂಡರ್ ಕರೆಯಲಾಗಿದ್ದು ಪ್ರಸ್ತಾಪಿತ ಕಾಮಗಾರಿಗೆ ದಿನಾಂಕ: 06-11-2021 ರಂದು ಮಾನ್ಯ ಮುಖ್ಯ ಆಯುಕ್ತರವರ ಅಧ್ಯಕ್ಷತೆಯಲ್ಲಿ ತಾಂತ್ರಿಕ ಮೌಲ್ಯಮಾಪನ/ಆರ್ಥಿಕ ಮೌಲ್ಯಮಾಪನ ಮತ್ತು ದರಸಂದಾನ ಸಮಿತಿಯಲ್ಲಿ ತಾಂತ್ರಿಕ ಮೌಲ್ಯಮಾಪನಕ್ಕೆ ಅನುಮೋದನೆ ದೊರೆತಿದ್ದು ಅದರಂತೆ ದಿನಾಂಕ: 18-11-2021 ರಂದು ಅರ್ಹ ಬಿಡ್‌ದಾರರ ಆರ್ಥಿಕ ಬಿಡ್ ತೆರೆಯಲಾಗಿದ್ದು, ಅತೀ ಕಡಿಮೆ ದರನಮೂದಿಸಿರುವ Sri. K R Santhosh Kumar ರವರು ನಮೂದಿಸಿರುವ ರೂ. 5,40,67,543.32 ಗಳು 2018-19ನೇ ಸಾಲಿನ ದರಗಳಿಗೆ ಹೋಲಿಸಿದಾಗ ಶೇಕಡ(+)2.99%ರಷ್ಟು ಹೆಚ್ಚು ದರಗಳಾಗಿದ್ದು, ದಿನಾಂಕ: 02-11-2021 ರಂದು ಹೊರಡಿಸಲಾದ ಪರಿಷ್ಕೃತ ದರಗಳಿಗೆ ಹೋಲಿಸಿದಾದ (-)5.14% ರಷ್ಟು ಕಡಿಮೆ ಇರುತ್ತದೆ. ಸದರಿಯವರ ದರಗಳಿಗೆ ಅನುಮೋದನೆಗೆ ಘನ ಸರ್ಕಾರಕ್ಕೆ ಸಲ್ಲಿಸಲು ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಮುಖ್ಯ ಆಯುಕ್ತರ ಅಧ್ಯಕ್ಷತೆಯ ತಾಂತ್ರಿಕ ಮೌಲ್ಯಮಾಪನ/ಆರ್ಥಿಕ ಮೌಲ್ಯಮಾಪನ ಮತ್ತು ದರಸಂಧಾನ ಸಮಿತಿ ಮುಂದೆ ಮಂಡಿಸಲು ಆದೇಶಕ್ಕಾಗಿ ಸಲ್ಲಿಸಿದೆ.
(50)	**ಮುಖ್ಯ ಅಭಿಯಂತರರು (ಯ.ವ)** ಕಂಡಿಕೆ (46) ರಿಂದ (49) ರವರೆಗಿನ ವರದಿಯಂತೆ, ಮಾನ್ಯ ಮುಖ್ಯ ಆಯುಕ್ತರ ಅಧ್ಯಕ್ಷತೆಯ ತಾಂತ್ರಿಕ ಮೌಲ್ಯಮಾಪನ/ಆರ್ಥಿಕ ಮೌಲ್ಯಮಾಪನ ಮತ್ತು ದರಸಂಧಾನ ಸಮಿತಿ ಮುಂದೆ ಮಂಡಿಸಲು ಆದೇಶ ಕೋರಿದೆ. ಮುಖ್ಯ ಅಭಿಯಂತರರು ಯಲಹಂಕ ವಲಯ
51	**ಪ್ರಧಾನ ಅಭಿಯಂತರರು**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ — 21 —

..... ಕಡತದ ಸಂಖ್ಯೆ .....

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಮಂಡಿಸಿದೆ:-

52) ಪೂರ್ವ ಕಂಡಿಕೆಗಳನ್ನು ಅವಗಾಹನೆಗೆ ತರುತ್ತಾ, ಮುಖ್ಯ ಅಭಿಯಂತರರು (ಯಲಹಂಕ) ರವರು ಕಂಡಿಕೆ (50) ರಲ್ಲಿ ಪ್ರಸಾಪಿತ ಕಾಮಗಾರಿಯ ಕಡತವನ್ನು ತಾಂತ್ರಿಕ ಮೌಲ್ಯಮಾಪನ / ಆರ್ಥಿಕ ಮೌಲ್ಯಮಾಪನ ಮತ್ತು ದರ ಸಂಧಾನ ಸಮಿತಿ ಮುಂದೆ ಮಂಡಿಸಲು ಶಿಫಾರಸ್ಸು ಮಾಡಿ ಕೋರಿರುವುದರ ಸಂಬಂಧ ಮುಂದಿನ ಆದೇಶಕ್ಕಾಗಿ ಮಂಡಿಸಿದೆ.

ಸಹಾಯಕ ಅಭಿಯಂತರರು

ತಾಂತ್ರಿಕ ಸಹಾಯಕರು V.S 2/12/21

ಪ್ರಧಾನ ಅಭಿಯಂತರರು) 3)

ಕಂಡಿಕೆ (52) ರಲ್ಲಿನ ಅಂಶಕ್ಕೆ ಆದೇಶ ಕೋರಬಹುದಾಗಿರುತ್ತದೆ.

ಪ್ರಧಾನ ಅಭಿಯಂತರರು 2/12/2021

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

54 ವಲಯ ಆಯುಕ್ತರು (Yelahanka)

ವಿದಾ ಅನ್ವಯವಾಗುವ ಶಾಸನ/ನಿಯಮ

ಮತ್ತು/ಅಥವಾ ಕಾಮಗಾರಿಯ ಮೂಲ ಉದ್ದೇಶಕ್ಕೆ

ಧಕ್ಕೆ ಬರದಂತೆ ಮುಂದಿನ

55) ಮುಖ್ಯ ಆಯುಕ್ತರು ಕ್ರಮವಹಿಸಲು

02.12.2021 ರಂದು ನಡೆದ ನಿರ್ಣಯಾನುಸಾರ.

ಮುಖ್ಯ ಆಯುಕ್ತರು (ಆದೇಶ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

2/12/21

ಮು.ಆ (ಆಡಳಿತ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದಿನಾಂಕ 2/12/21

ಸಂಖ್ಯೆ ಮು ಪಾ (ಆ) 34 ಕ್ರಿ/21-22

ಪು.ತಿ.ನೋ

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
56	ಆನಂತರ . 2.12.2021 ರಂದು ಮೊನ್ನೆ ಮುಖ್ಯ ಆಯುಕ್ತರ ಕಛೇರಿಯಲ್ಲಿ ನಡೆದ ಗೃಹಕ/ಅರ್ಹತೆ/ಪರಿವೀಕ್ಷಣಾ ಸಭೆಯಲ್ಲಿ ನಡೆದ ನಡವಳಿಯನ್ನು ಸಕಾರಣ ಮಂಡಿಸಿದೆ. ಪೂರಕವಾಗಿದೆ.
57	ಮೊನ್ನೆ ಮುಖ್ಯ ಆಯುಕ್ತರು ಮುಖ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
58	ಮು.ಲ(ಪರಿಪಾಲನೆಗಾಗಿ)
	ಸಂಖ್ಯೆ: 14 ದಿನಾಂಕ: 13-04-22 13/04

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸರ್ಕಾರದ ಆದೇಶ ಸಂಖ್ಯೆ: ನಅಇ 06 ಎಂಎನ್‌ವೈ 2021, ದಿನಾಂಕ: 29–04–2021ರನ್ವಯ ಬಿಬಿಎಂಪಿ ವ್ಯಾಪ್ತಿಯ 110 ಹಳ್ಳಿಗಳ ರಸ್ತೆ ದುರಸ್ಥಿ ಮತ್ತು ಅಭಿವೃದ್ಧಿ ಕಾಮಗಾರಿಗಳ ಕ್ರಿಯಾ ಯೋಜನೆಯಡಿ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕೈಗೊಳ್ಳಲು ಉದ್ದೇಶಿಸಿರುವ "Improvements and Restoration of roads in Ward No.05 (Package 01) (Package Consists of 6 works) Indent No. 48374" ಪ್ಯಾಕೇಜಿನ ರೂ.6.00 ಕೋಟಿಗಳ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ಮತ್ತು ಟೆಂಡರ್‌ಗೆ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ನಅಇ 06 ಎಂಎನ್‌ವೈ 2021, ದಿನಾಂಕ: 29–04–2021.
2. ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಪತ್ರ ಸಂಖ್ಯೆ: ಮು.ಆ/ಪಿಆರ್/3475/2021–22, ದಿನಾಂಕ: 29–12–2021.
3. ದಿನಾಂಕ: 22–02–2022 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ನಡವಳಿ.

* * * * *

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ: 29–04–2021ರ ಆದೇಶದಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ 2020–21ನೇ ಸಾಲಿನ ರಾಜ್ಯ ಆಯವ್ಯಯದ ಕಂಡಿಕೆ: 205 ರಲ್ಲಿ ಘೋಷಿಸಿರುವಂತೆ ಬಿಬಿಎಂಪಿ ವ್ಯಾಪ್ತಿಯ 110 ಹಳ್ಳಿಗಳ ರಸ್ತೆ ದುರಸ್ಥಿ ಮತ್ತು ಅಭಿವೃದ್ಧಿ ಕಾಮಗಾರಿಗಳಿಗೆ ಒಟ್ಟು ರೂ.1000.00 ಕೋಟಿಗಳ ಅಂದಾಜು ಮೊತ್ತದ ಕ್ರಿಯಾಯೋಜನೆಗೆ ಅನುಮೋದನೆ ನೀಡಿ ಆದೇಶಿಸಿದ್ದು, ಸದರಿ ಆದೇಶದಲ್ಲಿ ಬ್ಯಾಟರಾಯನಪುರ ವಿಧಾನ ಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕ್ರಮ ಸಂಖ್ಯೆ: 271, 272, 273, 274, 275 ಮತ್ತು 276ರ 06 ಕಾಮಗಾರಿಗಳಿಗೆ ಒಟ್ಟು ರೂ.6.00 ಕೋಟಿಗಳ ಅನುದಾನ ನಿಗಧಿಪಡಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿನಾಂಕ: 29–12–2021ರ ಪತ್ರದಲ್ಲಿ, ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ 110 ಹಳ್ಳಿಗಳ ರಸ್ತೆಗಳನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ನೀರಿನ ಪೈಪ್‌ಲೈನ್ ಹಾಗೂ ಒಳಚರಂಡಿ ಅಳವಡಿಸಲು ರಸ್ತೆಗಳನ್ನು ಅಗೆದಿದ್ದು, ಅವುಗಳನ್ನು ಪುನಶ್ಚೇತನಗೊಳಿಸಿದ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿರುವುದರಿಂದ 2020–21ನೇ ಸಾಲಿನ ರಾಜ್ಯ ಸರ್ಕಾರದ ಆಯವ್ಯಯದಲ್ಲಿ 110 ಹಳ್ಳಿಗಳಲ್ಲಿ ಅಗೆದಿರುವ ರಸ್ತೆಗಳನ್ನು ಪುನಶ್ಚೇತನಗೊಳಿಸುವ ಸಲುವಾಗಿ ರೂ.1000.00 ಕೋಟಿಗಳ ಅನುದಾನವನ್ನು ಮೀಸಲಿರಿಸಲಾಗಿರುತ್ತದೆ. ಈ ಅನುದಾನದಡಿಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ನಅಇ 06 ಎಂಎನ್‌ವೈ 2021, ದಿನಾಂಕ: 29–04–2021ರಲ್ಲಿ ವಿಧಾನ ಸಭಾ ಕ್ಷೇತ್ರವಾರು ಅನುದಾನವನ್ನು ಹಂಚಿಕೆ ಮಾಡಲಾಗಿದ್ದು, ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಬ್ಯಾಟರಾಯನಪುರ ವಿಭಾಗಕ್ಕೆ ಹಂಚಿಕೆ ಮಾಡಿರುವ ರೂ.17.00 ಕೋಟಿಗಳ ಅನುದಾನದಲ್ಲಿ ವಾರ್ಡ್ ಸಂಖ್ಯೆ: 06ರ ವ್ಯಾಪ್ತಿಯಲ್ಲಿನ 110 ಹಳ್ಳಿಗಳ ರಸ್ತೆಗಳನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ನೀರಿನ ಪೈಪ್‌ಲೈನ್ ಹಾಗೂ ಒಳಚರಂಡಿ

. . .2/-

ಅಳವಡಿಸಲು ಅಗೆದಿರುವ ರಸ್ತೆಗಳನ್ನು ಪುನಶ್ಚೇತನಗೊಳಿಸುವ ಕಾಮಗಾರಿಗಳ ಕ್ರಿಯಾ ಯೋಜನೆಯಡಿಯಲ್ಲಿ, ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳನ್ನು ಕೈಗೊಳ್ಳಲು ಬ್ಯಾಟರಾಯನಪುರ ವಿಭಾಗ ಕಛೇರಿಯಿಂದ ಟೆಂಡರ್ ಸಂಖ್ಯೆ: EE/BTP/BBMP/E-PMT/07/2021-22, ದಿನಾಂಕ: 03-09-2021 ರಂತೆ ದ್ವಿಲಕೋಟೆ ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿಯಂತೆ ರೂ.52493458.42 ಗಳಿಗೆ (ಟೆಂಡರ್‌ಗಿಟ್ಟ ಮೊತ್ತ) ಟೆಂಡರ್ ಆಹ್ವನಿಸಲಾಗಿರುತ್ತದೆ.

ಸದರಿ ಪ್ಯಾಕೇಜ್ ಟೆಂಡರ್ "Improvements and Restoration of roads in Ward No.05 (Package 01) (Package Consists of 6 works) Indent No. 48374" ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ದಿನಾಂಕ: 18-09-2021 ರಂದು ತೆರೆಯಲಾಗಿದ್ದು, ಐದು ಜನ ಬಿಡ್‌ದಾರರು ಭಾಗವಹಿಸಿರುತ್ತಾರೆ. ಸದರಿಯವರ ತಾಂತ್ರಿಕ ಬಿಡ್‌ನ್ನು ಅಂಗೀಕರಿಸಿ ಆರ್ಥಿಕ ಬಿಡ್‌ನ್ನು ತೆರೆಯಲು ಮುಖ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ಸಭೆಯ ನಿರ್ಣಯದಂತೆ ತಾಂತ್ರಿಕವಾಗಿ ಅರ್ಹರಾದ Gopi Reddy ರವರ ಆರ್ಥಿಕ ಬಿಡ್‌ನ್ನು ದಿನಾಂಕ: 18-11-2021 ರಂದು ತೆರೆಯಲಾಯಿತು. ವಿವರ ಈ ಕೆಳಕಂಡಂತಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತರು ತಿಳಿಸಿರುತ್ತಾರೆ.

ಕ್ರ. ಸಂ	ತಾಂತ್ರಿಕ ಮೌಲ್ಯಮಾಪನದಲ್ಲಿ ಅರ್ಹರಾದ ಗುತ್ತಿಗೆದಾರರು	ಅಂದಾಜು ಮೊತ್ತ	ಟೆಂಡರ್‌ಗಿಟ್ಟ ಮೊತ್ತ ರೂ. ಗಳಲ್ಲಿ	ಟೆಂಡರ್‌ನಲ್ಲಿ ನಮೂದಿಸಿರುವ ಮೊತ್ತ್ (ರೂ.ಗಳಲ್ಲಿ)	ಅನುಮೋದಿತ ಎಸ್.ಆರ್ ದರಗಳಿಗೆ ಹೋಲಿಸಿದಾಗ
1	K R Santosh Kumar	600.00	52493458.42	54067543.32	2.99% ಹೆಚ್ಚು
2	Gopi Reddy			54645420.05	4.09% ಹೆಚ್ಚು

ಸರ್ಕಾರದ ಆದೇಶ ಸಂಖ್ಯೆ: ನಅಇ 06 ಎಂಎನ್‌ವೈ 2021, ದಿನಾಂಕ: 29-04-2021ರಲ್ಲಿ ಕಾಮಗಾರಿಗಳ ಪಟ್ಟಿಗೆ ಅನುಮೋದನೆ ನೀಡಿದ್ದು, ತದನಂತರ ಪಾಲಿಕೆಯು ನಿಯಮಗಳಂತೆ ಅಗತ್ಯ ಕ್ರಮಗಳನ್ನು ಕೈಗೆತ್ತಿಕೊಂಡು, ಯಲಹಂಕ ವಲಯಕ್ಕೆ ಸೇರಿದ ಬ್ಯಾಟರಾಯನಪುರ ವಿಭಾಗದ ವ್ಯಾಪ್ತಿಗೆ ಸಂಬಂಧಪಟ್ಟಂತೆ ಕಾಮಗಾರಿಗಳ ಟೆಂಡರ್ ಪ್ಯಾಕೇಜ್ ಗುತ್ತಿಗೆದಾರರಾದ K R Santosh Kumar ರವರು ನಮೂದಿಸಿರುವ ಟೆಂಡರ್ ಮೊತ್ತ ರೂ.54067543.32 ಗಳು ಅನುಮೋದಿತ ದರಗಳಿಗೆ ಹೋಲಿಸಿದಾಗ ಶೇ.2.99% ಹೆಚ್ಚಾಗಿರುತ್ತದೆ.

ಮೇಲಿನ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ, "Improvements and Restoration of roads in Ward No.05 (Package 01) (Package Consists of 6 works) Indent No. 48374" ಪ್ಯಾಕೇಜಿನ ಯೋಜನಾ ಮೊತ್ತ ರೂ.600.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಹಾಗೂ ಗುತ್ತಿಗೆದಾರರಾದ K R Santosh Kumar ರವರು ನಮೂದಿಸಿರುವ ಟೆಂಡರ್ ಮೊತ್ತ ರೂ.54067543.32 ಗಳ ಅನುಮೋದಿತ ಅಂದಾಜು ಮೊತ್ತಕ್ಕೆ ಹೋಲಿಸಿದಾಗ ಶೇ.2.99% ಹೆಚ್ಚಾಗಿದ್ದು, (ಹಾಗೂ ಪ್ರಸ್ತುತ ಚಾಲ್ತಿಯಲ್ಲಿರುವ ಇಶ್ಯೂ ದರಗಳಿಗೆ ಹೋಲಿಸಿದಾಗ

. . .3/-

ಶೇ.-5.14% ಹೆಚ್ಚು ದರವಿರುತ್ತದೆ) ಸದರಿ ದರಗಳಿಗೆ ಟೆಂಡರ್ ಅನುಮೋದನೆ ನೀಡುವಂತೆ ಬಿಬಿಎಂಪಿ ಮುಖ್ಯ ಆಯುಕ್ತರು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ದಿನಾಂಕ: 22-02-2022 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ಮುಂದೆ ಬಿ.ಬಿ.ಎಂ.ಪಿ. ಆಯುಕ್ತರ ದಿನಾಂಕ: 29-12-2021ರ ಪ್ರಸ್ತಾವನೆಯನ್ನು ಮಂಡಿಸಲಾಗಿದ್ದು, ಅಧಿಕಾರಯುಕ್ತ ಸಮಿತಿ ಸಭೆಯಲ್ಲಿ, ವಿಷಯವನ್ನು ಚರ್ಚಿಸಿ ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.

> "ವಿವರವಾದ ಚರ್ಚೆಯ ನಂತರ Improvements and Restoration of Roads in Ward No. 05 (Package 01) (Package Consists of 6 works) ಪ್ಯಾಕೇಜಿನ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿ, K R Santhosh Kumar ರವರ ಬಿಡ್ಡನ್ನು ಟೆಂಡರ್‌ಗಿಟ್ಟ ಮೊತ್ತವಾದ ರೂ.5,24,93,458.42 ಗಳಿಗೆ ಹೋಲಿಸಿದಾಗ 1.00% ಅಧಿಕ ಅಂದರೆ ರೂ.5,30,18,393/- ಗಳಿಗೆ ಮಿತಿಗೊಳಿಸಿ ಅನುಮೋದಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು".

ದಿನಾಂಕ: 22-02-2022 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ನಿರ್ಣಯದಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ನಅಇ 17 ಎಂಎನ್‌ವೈ 2022 (ಇ),
ಬೆಂಗಳೂರು, ದಿನಾಂಕ: 12-04-2022.

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಸರ್ಕಾರದ ಆದೇಶ ಸಂಖ್ಯೆ: ನಅಇ 06 ಎಂಎನ್‌ವೈ 2021, ದಿನಾಂಕ: 29-04-2021 ರಲ್ಲಿ 2020-21ನೇ ಸಾಲಿನ ರಾಜ್ಯ ಆಯವ್ಯಯದ ಕಂಡಿಕೆ: 205 ರಲ್ಲಿ ಘೋಷಿಸಿರುವಂತೆ ಬಿಬಿಎಂಪಿ ವ್ಯಾಪ್ತಿಯ 110 ಹಳ್ಳಿಗಳ ರಸ್ತೆ ದುರಸ್ಥಿ ಮತ್ತು ಅಭಿವೃದ್ಧಿ ಕಾಮಗಾರಿಗಳಿಗೆ ಒಟ್ಟು ರೂ.1000.00 ಕೋಟಿಗಳ ಅಂದಾಜು ಮೊತ್ತದ ಕ್ರಿಯಾಯೋಜನೆಗೆ ಅನುಮೋದನೆ ನೀಡಿ ಆದೇಶಿಸಿದ್ದು, ಸದರಿ ಆದೇಶದ ಕ್ರಮ ಸಂಖ್ಯೆ: 271, 272, 273, 274, 275 ಮತ್ತು 276 ರಲ್ಲಿನ 06 ಕಾಮಗಾರಿಗಳನ್ನು ಒಗ್ಗೂಡಿಸಿ ಮಾಡಲಾಗಿರುವ "Improvements and Restoration of Roads in Ward No. 05 (Package 01) (Package Consists of 6 works)" ಪ್ಯಾಕೇಜಿನ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿ, ದಿನಾಂಕ: 22-02-2022 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ನಿರ್ಣಯದಂತೆ, K.R. Santhosh Kumar ರವರ ಬಿಡ್ಡನ್ನು ಟೆಂಡರ್‌ಗಿಟ್ಟ ಮೊತ್ತವಾದ ರೂ.5,24,93,458-42 ಗಳಿಗೆ ಹೋಲಿಸಿದಾಗ 1.00% ಅಧಿಕ ಅಂದರೆ ರೂ.5,30,18,393-00 (ಐದು ಕೋಟಿ ಮೂವತ್ತು ಲಕ್ಷದ ಹದಿನೆಂಟು ಸಾವಿರದ ಮೂರುನೂರ ತೊಂಭತ್ತ ಮೂರು ರೂಪಾಯಿಗಳು ಮಾತ್ರ) ಗಳಿಗೆ ಮಿತಿಗೊಳಿಸಿ ಟೆಂಡರ್‌ಗೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅನುಮೋದನೆಯನ್ನು ನೀಡಿದೆ.

ಷರತ್ತುಗಳು:

1. ಕಾಮಗಾರಿಗಳಿಗೆ ಅನುಮೋದನೆ ನೀಡಿರುವ ಮೊತ್ತಕ್ಕೆ ಬಿಡ್‌ದಾರರು ಒಪ್ಪದ ಪಕ್ಷದಲ್ಲಿ ಮರು ಟೆಂಡರ್ ಕರೆಯುವುದು.
2. ಮೇಲಿನ ಕಾಮಗಾರಿಗಳನ್ನು ಕೆ.ಟಿ.ಪಿ.ಪಿ. ಕಾಯ್ದೆ / ನಿಯಮಗಳು ಹಾಗೂ ಎಲ್ಲಾ ಚಾಲ್ತಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಿರುವುದನ್ನು ಬಿಬಿಎಂಪಿ ಮುಖ್ಯ ಆಯುಕ್ತರು ಖಚಿತಪಡಿಸಿಕೊಂಡು ಅನುಷ್ಠಾನಗೊಳಿಸುವುದು.

. . .4/-

3. ಈ ಕಾಮಗಾರಿಗೆ ತಗಲುವ ವೆಚ್ಚವನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 06 ಎಂಎನ್‌ವೈ 2021, ದಿನಾಂಕ: 29-04-2021ರಲ್ಲಿ ಮೀಸಲಿಟ್ಟಿರುವ ಅನುದಾನದಲ್ಲಿ ಭರಿಸುವುದು.
4. ಮೇಲಿನ ಕಾಮಗಾರಿಯನ್ನು ಸರ್ಕಾರದಿಂದ ಮಂಜೂರಾದ ಮೊತ್ತದ ಮಿತಿಯಲ್ಲಿಯೇ ಯಾವುದೇ ಹೆಚ್ಚುವರಿಯಾಗದಂತೆ ಅನುಷ್ಠಾನಗೊಳಿಸಲು ಕ್ರಮ ವಹಿಸತಕ್ಕದ್ದು ಹಾಗೂ ಹೆಚ್ಚುವರಿ ಟೆಂಡರ್ ಪ್ರೀಮಿಯಂ ಅನ್ನು ಬಿಬಿಎಂಪಿಯ ಸ್ವಂತ ಸಂಪನ್ಮೂಲದಿಂದ ಭರಿಸತಕ್ಕದ್ದು.
5. ಕರ್ನಾಟಕ ಆರ್ಥಿಕ ಸಂಹಿತೆ 1958 ಸಾಧಿಲ್ವಾರು ವೆಚ್ಚ ಕೈಪಿಡಿ ಅಧಿನಿಯಮ ಹಾಗೂ ಕಾಲಕಾಲಕ್ಕೆ ಚಾಲ್ತಿಯಲ್ಲಿರುವ ಎಲ್ಲಾ ಕಾಯ್ದೆ ನಿಯಮಗಳುಸಾರ ಕ್ರಮವಹಿಸತಕ್ಕದ್ದು.
6. ಸರ್ಕಾರವು ಕಾಮಗಾರಿಗಳಿಗೆ ಆಡಳಿತಾತ್ಮಕ ಮತ್ತು ಟೆಂಡರ್‌ಗಳಿಗೆ ಅನುಮೋದನೆ ನೀಡಿದ್ದಾಗ್ಯೂ ಸಹ ಕಾಮಗಾರಿಯು ಪುನರಾವರ್ತನೆ ಆಗದಂತೆ ನೋಡಿಕೊಳ್ಳತಕ್ಕದ್ದು. ಅನುಮೋದನೆ ಗೊಂಡಿರುವ ಕಾಮಗಾರಿಯನ್ನಲ್ಲದೆ ಯಾವುದೇ ಕಾರಣಕ್ಕೆ ಬೇರೆ ಕಾಮಗಾರಿಗಳನ್ನು ಕೈಗೊಳ್ಳಬಾರದು.
7. ಮೇಲಿನ ಕಾಮಗಾರಿಗೆ 3rd Party Quality Monitors ಗಳನ್ನು ನೇಮಿಸಿಕೊಂಡು ಉತ್ತಮ ಗುಣಮಟ್ಟದಿಂದ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಕ್ರಮ ವಹಿಸತಕ್ಕದ್ದು.
8. ದಿನಾಂಕ: 22-02-2022ರ ಅಧಿಕಾರಯುಕ್ತ ಸಮಿತಿ ಸಭೆಯ ನಡವಳಿಯಲ್ಲಿ ನಮೂದಿಸಿರುವ ಎಲ್ಲಾ ಷರತ್ತು ಹಾಗೂ ನಿಬಂಧನೆಗಳನ್ನು ತಪ್ಪದೆ ಪಾಲಿಸತಕ್ಕದ್ದು.
9. ಸದರಿ ಬಿಡ್ದುದಾರರು ಅಥವಾ ಇನ್ಯಾವುದೇ ಹಂತದಲ್ಲಿ ತಪ್ಪು ಮಾಹಿತಿ / ದಾಖಲೆ ನೀಡಿರುವುದು ಕಂಡುಬಂದಲ್ಲಿ ಟೆಂಡರ್‌ಅನ್ನು ರದ್ದುಪಡಿಸಲು ಬಿಬಿಎಂಪಿ ಮುಖ್ಯ ಆಯುಕ್ತರು ನಿಯಮಾನುಸಾರ ಕ್ರಮ ವಹಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಲಕ್ಷ್ಮೀಸಾಗರ್ ಎನ್.ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ.)

12/04

ಇವರಿಗೆ:

1. ಮಹಾಲೇಖಪಾಲರು, ಲೆಕ್ಕ ತಪಾಸಣೆ/ಲೆಕ್ಕಪತ್ರ, ಕರ್ನಾಟಕ ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
3. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
5. ವಿಶೇಷ ಆಯುಕ್ತರು (ಯೋಜನೆ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
6. ಪ್ರಧಾನ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
7. ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 3 ಮತ್ತು 9), ವಿಧಾನಸೌಧ, ಬೆಂಗಳೂರು.
9. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
10. ಸರ್ಕಾರದ ಉಪ ಕಾರ್ಯದರ್ಶಿ-3 ರವರ ಆಪ್ತ ಸಹಾಯಕರು, ನಗರಾಭಿವೃದ್ಧಿ ಇಲಾಖೆ.
11. ಕಾರ್ಯಪಾಲಕ ಅಭಿಯಂತರರು (ತಾಂತ್ರಿಕ ಕೋಶ), ನಗರಾಭಿವೃದ್ಧಿ ಇಲಾಖೆ.
12. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.